**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 09-12-2025:**

**ಪಾಟೀಸವಾಲುಃ ಆರೋಪಿತರ ಪರವಾಗಿ ಶ್ರೀ ಸಿ ಎನ್ ವಿ ವಕೀಲರಿಂದಃ**

ನಿಪಿ-162ರಲ್ಲಿ ಚೆಕ್ ಅವಧಿ ಯಾವತ್ತಿನಿಂದ ಯಾವತ್ತಿನವರೆಗೆ ಎಂದು ನಮೂದು ಮಾಡಿಲ್ಲ. ನಿಪಿ-162ರಲ್ಲಿ ಸ್ವತ್ತಿನ ಮಾರುಕಟ್ಟೆ ಮೌಲ್ಯವನ್ನು ನಾನು ನನಗೆ ಬೇಕಾದ ರೀತಿಯಲ್ಲಿ ಹೆಚ್ಚಿಗೆ ನಮೂದಿಸಿರುತ್ತೇನೆ ಮತ್ತು ನಾನು ಕ್ರಯಪತ್ರದಲ್ಲಿ ಕಾಣಿಸಿದ ಮೌಲ್ಯಕ್ಕೆ ನಿಗಧಿಸಬೇಕಾಗಿತ್ತು ಎಂದರೆ ಸಾಕ್ಷಿಯು ಕ್ರಯಪತ್ರದ ಮೌಲ್ಯವನ್ನು ಗಣನೆಗೆ ತೆಗೆದುಕೊಂಡಿರುತ್ತೇನೆ ಎನ್ನುತ್ತಾರೆ. ನಾನು ಉದ್ದೇಶಪೂರ್ವಕವಾಗಿ ಅವರ ಆದಾಯವನ್ನು ಕಡಿಮೆಗೊಳಿಸಿ ಖರ್ಚನ್ನು ಜಾಸ್ತಿ ತೋರಿಸಿರುತ್ತೇನೆ ಎಂದರೆ ಸರಿಯಲ್ಲ. ಸೋರ್ಸ್ ವರದಿಯ ಮಾಹಿತಿಯನ್ನು ಸಂಗ್ರಹಿಸಲು ಎಷ್ಟು ಸಮಯ ತೆಗೆದುಕೊಂಡಿರುತ್ತೇನೆ ಎಂದು ಈಗ ನೆನಪಿಲ್ಲ. ನನಗೆ ಬಂದ ಮಾಹಿತಿಯನ್ನು ನಾನು ಲಿಖಿತವಾಗಿ ಬರೆದುಕೊಂಡಿದ್ದೇನಾ ಎಂದರೆ ಸಾಕ್ಷಿಯು ಸೋರ್ಸ್ ವರದಿ ಬಿಟ್ಟರೆ ಬೇರೆ ಲಿಖಿತವಾಗಿ ಬರೆದುಕೊಂಡಿಲ್ಲ ಎನ್ನುತ್ತಾರೆ. ಸೋರ್ಸ್ ವರದಿಯ ಮಾಹಿತಿಯನ್ನು ಜನರಲ್ ಡೈರಿಯಲ್ಲಿ ನಮೂದಿಸಿದ್ದೀರಾ ಎಂದರೆ ನೆನಪಿಲ್ಲ ಎನ್ನುತ್ತಾರೆ. ಸೋರ್ಸ್ ವರದಿಯ ಮಾಹಿತಿ ನಿಜ ಎನ್ನುವ ಬಗ್ಗೆ ನಾನು ಏನು ಕ್ರಮ ಕೈಗೊಂಡಿದ್ದೇನೆ ಎಂದರೆ ಸಾಕ್ಷಿಯು ನಾನು ಗುಪ್ತ ಮಾಹಿತಿಯ ಮೂಲಕ ಮಾಡಿರುವುದು ಎನ್ನುತ್ತಾರೆ. ಮಾಹಿತಿ ನೀಡಿದ ವ್ಯಕ್ತಿಗೂ ಆರೋಪಿತರಿಗೂ ಏನಾದರೂ ವೈಮನಸ್ಸು ಇತ್ತಾ ಎಂದು ನಾನು ವಿಚಾರ ಮಾಡಿದ್ದೇನಾ ಎಂದರೆ ಸಾಕ್ಷಿಯು ಆ ತರಹ ಏನೂ ಇರಲಿಲ್ಲ ಎನ್ನುತ್ತಾರೆ. ಮಾಹಿತಿ ನೀಡಿದ ವ್ಯಕ್ತಿಯು ಇದೇ ರೀತಿಯ ಮಾಹಿತಿಯನ್ನು ಬೇರೆ ಪ್ರಕರಣಗಳಲ್ಲಿ ನೀಡುತ್ತಿದ್ದರೋ ಎನ್ನುವ ಬಗ್ಗೆ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿಯು ಬೇರೆ ಯಾವುದೇ ಪ್ರಕರಣದ ಮಾಹಿತಿ ಸದರಿ ವ್ಯಕ್ತಿ ನೀಡಿರಲಿಲ್ಲ ಎನ್ನುತ್ತಾರೆ. ಆ ರೀತಿ ಮಾಹಿತಿ ನೀಡಿದ ವ್ಯಕ್ತಿಗಳಿಗೆ ನಮ್ಮ ಇಲಾಖೆಯಿಂದ ಯಾವುದೇ ಬಹುಮಾನ ಅಥವಾ ಇನ್ನಿತರ ಸವಲತ್ತುಗಳನ್ನು ನೀಡುವುದಿಲ್ಲ ಹಾಗು ನೀಡಿಲ್ಲ. ಆ ಮಾಹಿತಿ ನೀಡಿದ ವ್ಯಕ್ತಿಯ ಹಿನ್ನೆಲೆಯನ್ನು ನಾನು ಕಲೆಹಾಕಿಲ್ಲ. ಸೋರ್ಸ್ ವರದಿಯನ್ನು ನನ್ನ ಊಹೆ ಮೇರೆಗೆ ತಯಾರಿಸಿರುತ್ತೇನೆಯೇ ವಿನಃ ಅದು ನಿಜಾಂಶವನ್ನು ಒಳಗೊಂಡಿಲ್ಲ ಎಂದರೆ ಸರಿಯಲ್ಲ. ದೋ.ಪಟ್ಟಿ ಸಲ್ಲಿಸುವ ಸಲುವಾಗಿಯೇ ಆಸ್ತಿ ಮತ್ತು ಖರ್ಚನ್ನು ಯಥೇಚ್ಛವಾಗಿ ತೋರಿಸಿ ಆದಾಯವನ್ನು ಕಡಿಮೆ ತೋರಿಸಿರುತ್ತೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**